ಕರ್ನಾಟಕ ಸರ್ಕಾರ

ಸಂಖ್ಯೆ: ಜೆಆರ್‌ಓ(1ಎ)/43/2014-15(ಭಾಗ-1)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆಯುಕ್ತಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ: 02/01/2019

# ಹಿಂಬರಹ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪಿಜಿಡಿಪಿಹೆಚ್‌ಎಂ/ಡಿಪಿಹೆಚ್/ಎಂಪಿಹೆಚ್ ವ್ಯಾಸಂಗ ಮಾಡಿದ ವೈದ್ಯರುಗಳು ಹೆಚ್ಚುವರಿ ಭತ್ಯೆ ಮಂಜೂರಾತಿ ಮಾಡಲು ಸಲ್ಲಿಸಿದ ಪ್ರಸ್ತಾವನೆ ಪರಿಶೀಲಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಆಕುಕ 560 ಹೆಚ್‌ಎಸ್‌ಹೆಚ್ 2014, ದಿ: 06-07-2015 ಮತ್ತು ತಿದ್ದುಪಡಿ ದಿ: 07-05-2016 ರ ಸರ್ಕಾರಿ ಆದೇಶದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ತಜ್ಞ ವೈದ್ಯರು/ ವೈದ್ಯಾಧಿಕಾರಿಗಳು ಹಾಗೂ ದಂತ ಆರೋಗ್ಯಾಧಿಕಾರಿಗಳಿಗೆ ಹೆಚ್ಚುವರಿ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಆಕುಕ 560 ಹೆಚ್‌ಎಸ್‌ಹೆಚ್ 2016, ದಿ:30-05-2017ರಲ್ಲಿ ವೈದ್ಯಕೀಯ ನ್ಯಾಯಿಕ ಭತ್ಯೆ ಹಾಗೂ ತುರ್ತು ಚಿಕಿತ್ಸಾ ಭತ್ಯೆಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ವಿವಿಧ ಆಡಳಿತಾತ್ಮಕ ಹುದ್ದೆಗಳಲ್ಲಿ ಅಂದರೆ, ನಿರ್ದೇಶಕರು, ಅಪರ ನಿರ್ದೇಶಕರು, ಸಹ ನಿರ್ದೇಶಕರು, ಉಪ ನಿರ್ದೇಶಕರು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಜಿಲ್ಲಾ ಶಸ್ತ್ರಚಿಕಿತ್ಸಕರು, ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಹಾಗೂ ಸರ್ಕಾರಿ ಆಸ್ಪತ್ರೆ ಹಾಗೂ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಜ್ಞರು ಹಾಗೂ ವೈದ್ಯಾಧಿಕಾರಿಗಳಿಗೆ ಸದರಿ ಭತ್ಯೆಗಳನ್ನು ಮುಂದುವರಿಸಿದೆ ಹಾಗೂ ಮುಂದುವರೆದು, ಭಾರತದಲ್ಲಿ ಕಾನೂನುಬದ್ಧವಾಗಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯಗಳಿಂದ/ ಸರ್ಕಾರದಿಂದ ಪಿಜಿಡಿಪಿಹೆಚ್‌ಎಂ, ಡಿಪಿಹೆಚ್ ಹಾಗೂ ಎಂಪಿಹೆಚ್ ವ್ಯಾಸಂಗ ಪೂರೈಸಿದ ವೈದ್ಯಾಧಿಕಾರಿಗಳಿಗೆ ಸಹ ವೈದ್ಯಕೀಯ ನ್ಯಾಯಿಕ ಭತ್ಯೆ ತುರ್ತು ಚಿಕಿತ್ಸಾ ಭತ್ಯೆಯನ್ನು ಮಂಜೂರು ಮಾಡಲಾಗಿದೆ.

ಇಲಾಖೆಯಲ್ಲಿ ಪಿಜಿಡಿಪಿಹೆಚ್‌ಎಂ/ಡಿಪಿಹೆಚ್/ಎಂಪಿಹೆಚ್ ವ್ಯಾಸಂಗ ಮಾಡಿದ ವೈದ್ಯರು ಸಲ್ಲಿಸಿರುವ ಅರ್ಜಿ ಪರಿಶೀಲಿಸಿದಾಗ ವೈದ್ಯರುಗಳು ಸದರಿ ವ್ಯಾಸಂಗಕ್ಕೆ ಇಲಾಖೆಯ ಅನುಮತಿ ಪಡೆದಿರುವ ಬಗ್ಗೆ ಹಾಗೂ ಸರ್ಕಾರದ ಆದೇಶ ಪ್ರತಿ ಹಾಗೂ ಮಹಾಲೇಖಪಾಲರ ನಮೂನೆಯನ್ನು ಶಿಫಾರಸ್ಸಿನೊಂದಿಗೆ ಹಾಗೂ ಪಿಜಿಡಿಪಿಹೆಚ್‌ಎಂ/ಡಿಪಿಹೆಚ್/ಎಂಪಿಹೆಚ್ ಪದವಿ ಪಡೆದು ಕೆ.ಎಂ.ಸಿ.ಯಲ್ಲಿ ನೋಂದಣಿಯಾಗಿರುವ ಪ್ರತಿಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಆಕುಕ 560 ಹೆಚ್‌ಎಸ್‌ಹೆಚ್ 2016, ದಿ:30-05-2017ರ ಸರ್ಕಾರದ ಆದೇಶದಂತೆ ಸರ್ಕಾರದಿಂದ ಪಿಜಿಡಿಪಿಹೆಚ್‌ಎಂ/ಡಿಪಿಹೆಚ್/ಎಂಪಿಹೆಚ್ ವ್ಯಾಸಂಗ ಮಾಡಿದ ವೈದ್ಯರುಗಳಿಗೆ ಹೆಚ್ಚುವರಿ ಭತ್ಯೆ ಮಂಜೂರಾತಿ ಮಾಡಲು ಅವಕಾಶವಿರುತ್ತದೆ.

ಅದ್ದರಿಂದ ಕೆ.ಎಂ.ಸಿ ಮತ್ತು ಯು.ಜಿ.ಸಿ, ನವದೆಹಲಿ ಇವರುಗಳ ಅಭಿಪ್ರಾಯ ಹಾಗೂ ಸೂಚನೆಯಂತೆ ಪಿಜಿಡಿಪಿಹೆಚ್‌ಎಂ/ಡಿಪಿಹೆಚ್/ಎಂಪಿಹೆಚ್ ವ್ಯಾಸಂಗವನ್ನು ದೂರ ಶಿಕ್ಷಣದ ಮೂಲಕ ಪಡೆದ ವೈದ್ಯರುಗಳಿಗೆ ವೈದ್ಯಕೀಯ ನ್ಯಾಯಿಕ ಭತ್ಯೆ ತುರ್ತು ಚಿಕಿತ್ಸಾ ಭತ್ಯೆಯನ್ನು ಮಂಜೂರು ಮಾಡಲು ನಿಯಮಗಳಲ್ಲಿ ಅವಕಾಶವಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

" ಕಛೇರಿ ಟಿಪ್ಪಣಿ ಮಾನ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ"

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ... ಬೆಂಗಳೂರು ... 07/01/19

ಮುಖ್ಯ ಆಡಳಿತಾಧಿಕಾರಿಗಳು
ಆರೋಗ್ಯ ಮತ್ತು ಕು.ಕ. ಸೇವೆಗಳು

ಇವರಿಗೆ,
ಸಂಬಂಧಪಟ್ಟ ವೈದ್ಯರುಗಳಿಗೆ,

**ಪ್ರತಿಯನ್ನು:**

1. ಮಹಾಲೇಖಪಾಲರು, ಕರ್ನಾಟಕ ವಲಯ, ಬೆಂಗಳೂರು-560001.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು.

O/C 7/1/19 DESPATCHED

3. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, / ಜಿಲ್ಲಾ ಶಸ್ತ್ರ ಚಿಕಿತ್ಸಕರು___________ ಜಿಲ್ಲೆ.
4. ವೈದ್ಯಕೀಯ ಅಧೀಕ್ಷಕರು, ___________________ ಜಿಲ್ಲೆ.
5. ಆಡಳಿತಾ ವೈದ್ಯಾಧಿಕಾರಿಗಳು, ಪ್ರಾ.ಆ.ಕೇಂದ್ರ/ಸ.ಆ.ಕೇಂದ್ರ/ಸಾ.ಆಸ್ಪತ್ರೆ, __________________ಜಿಲ್ಲೆ
6. ಇಲಾಖಾ ವೈಬ್‌ಸೈಟ್ ನಲ್ಲಿ ಪ್ರಕಟಿಸಲು
7. ಕಛೇರಿ ಪ್ರತಿ.